DITTO WS

Reg. No. : ....................................

Name : ..........................................

**S-2206**

**SECOND YEAR HIGHER SECONDARY**
**SAY / IMPROVEMENT EXAMINATION, JUNE – 2023**

Part – II

**KANNADA (Language)**

Maximum : 80 Scores

Time : **2½** Hours
Cool-off time : **15** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)** **(4 × 1 = 4)**

1. 'ಊರ್ಮಿಳಾ' ಪದ್ಯವನ್ನು ಬರೆದ ಕವಿ ?

   (ಕಯ್ಯಾರ ಕಿಞ್ಞಣ್ಣ ರೈ, ದ.ರಾ. ಬೇಂದ್ರೆ, ಕುವೆಂಪು, ಸಿದ್ಧಲಿಂಗಯ್ಯ)

2. 'ಕೆರೆಯ ದಡದಲ್ಲಿ' ಪಾಠಭಾಗವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?

   (ಕಾದಂಬರಿ, ನಾಟಕ, ಪರಿಸರ ಲೇಖನ, ಕಾವ್ಯ)

3. 'ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ' – ಇದು ಯಾವ ಪದ್ಯದ ಸಾಲು ?

   (ಅಪ್ಪನೂ ಒಲೆಯುರಿಯೂ, ಅವರವರ ದಾರಿ, ನಡೆವುದೊಂದೇ ಭೂಮಿ, ಸಾವಿರಾರು ನದಿಗಳು)

4. ರೇಡಿಯಂ ಕಂಡು ಹಿಡಿದವರು ಯಾರು ?

   (ಮೇರಿ ಕ್ಯೂರಿ, ಎಡಿಸನ್, ಫೇರಡೆ, ಗೆಲಿಲಿಯೋ)



P.T.O.

DITTO WS

**(5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.)** **(4 × 1 = 4)**

5. ಬಿರುಗಾಳಿಯೊಂದಿಗೆ – ಈ ಪದವನ್ನು ವಿಂಗಡಿಸಿ ಬರೆಯಿರಿ.

6. ನೆಗ್ಗಿಸು – ಈ ಪದದ ಅರ್ಥವೇನು ?

7. ನಿಷೇದಾರ್ಥ ರೂಪಕ್ಕೆ ಒಂದು ಉದಾಹರಣೆ ಕೊಡಿರಿ.

8. ವಿಜ್ಞಾನ – ಈ ಪದದ ಭಾವನಾಮ ರೂಪವನ್ನು ಬರೆಯಿರಿ.

9. ಮೊಗ – ಈ ಪದದ ಸಂಸ್ಕೃತ ರೂಪವನ್ನು ಬರೆಯಿರಿ.

10. ಭೂಮಿ – ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

**(11 ರಿಂದ 17 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.)** **(5 × 2 = 10)**

11. ದೊರೆಗಳ್ಗೆತ್ತಣ ನಂಟರ್ರೈ – ಈ ಸಾಲಿನ ಸ್ವಾರಸ್ಯವೇನು ?

12. ಕರ್ಬೊಗೆ – ಈ ಪದವನ್ನು ವಿಗ್ರಹಿಸಿ ಸಮಾಸವನ್ನು ತಿಳಿಸಿರಿ.

13. ಪರಿಸರ ಸಂರಕ್ಷಣೆಗೆ ಅಗತ್ಯವಾದ ಎರಡು ಘೋಷಣಾ ವಾಕ್ಯಗಳನ್ನು ಬರೆಯಿರಿ.

14. ಕೈ ಕೆಸರಾದರೆ ಬಾಯಿ ಮೊಸರು – ಈ ಗಾದೆ ಮಾತನ್ನು ವಿಸ್ತರಿಸಿರಿ.

15. ಸುಬ್ಬಣ್ಣನವರು ನದಿಯಲ್ಲಿ ಪಿಟೀಲನ್ನು ತೊರೆಯಲು ಕಾರಣವೇನು ?

16. ಚೆಲುವನು ಮನೆಬಿಟ್ಟು ಹೋಗಲು ಕಾರಣವೇನು ?

17. 'ಚೇನ್ನನ ನಾಯಿಯು ತನ್ನಿಂದಾದ <u>ಅಳಿಲಸೇವೆ</u>ಯನ್ನು ಮಾಡಿತು'. ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.

DITTO WS

(18 ರಿಂದ 22 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.) **(4 × 4 = 16)**

18. ಸರಿ ಹೊಂದಿಸಿ ಬರೆಯಿರಿ.

| ಅ | ಆ |
|---|---|
| ತರುಣ ಸೂರ್ಯಂ ಕತ್ತಲೆಯನು ಹೊಕ್ಕಂತಾಯ್ತು | ರನ್ನ |
| ಗುರುವಚನಮಲಂಘನೀಯಂ | ರಾಘವಾಂಕ |
| ಸೋಮೇಶ್ವರ ಶತಕ | ನಂಜುಂಡ ಕವಿ |
| ನಾಡಸಿರಿ | ಪುಲಿಗೆರೆಯ ಸೋಮನಾಥ |

19. ಕೆಳಗೆ ನೀಡಲಾದ ಸಾಲುಗಳ ಆಶಯವನ್ನು ಬರೆಯಿರಿ.

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ
ಒಣಗಲ್ವೈರಿಗೆ ಬಾರದಿರ್ದ ಮಳೆ ತಾಂ ಬಂದೇನದಾಪತ್ತಿನೊಳ್
ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ
ತೃಣವೇ ಪರ್ವತವಲ್ಲವೇ ಹರಹರಾ ಶ್ರೀಚೆನ್ನ ಸೋಮೇಶ್ವರಾ

20. 'ತರುಣಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು' ಎಂಬ ಕಾವ್ಯಭಾಗದಲ್ಲಿ ಬಂದಿರುವ ಚಂದ್ರಮತಿಯ ಪಾತ್ರಚಿತ್ರಣವನ್ನು ಮಾಡಿರಿ.

21. ನಿಮ್ಮ ಶಾಲೆಯ ಕುಡಿನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ವಿನಂತಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಲು ಮನವಿ ಪತ್ರವೊಂದನ್ನು ಸಿದ್ಧಪಡಿಸಿರಿ.

22. ಕೆಳಗೆ ನೀಡಿರುವ ಪದ್ಯಭಾಗದ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ.

ಭೂರಮೆಯುಟ್ಟೊಲ್ಲದಿಟ್ಟ ದುಕೂಲದ
ಸೀರೆಗಳಂತೆಂ ಕಂಗೊಳಿಪ
ಭೂರಿನದಿಗಳಾ ಕರ್ನಾಟಭೂಮಿಯೊ
ಳೋರಂತೆ ಪರಿದೆಸೆದಿಹವು

(23 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.) (5 × 6 = 30)

23. ಗೊರೂರು ರಾಮಸ್ವಾಮಿ ಅಯ್ಯಂಗಾರರು ಬರೆದ 'ಬೂತಯ್ಯನ ಮಗ ಅಯ್ಯು' ಎಂಬ ಕಿರು ಕಾದಂಬರಿಯು ಚಲನಚಿತ್ರವಾಗಿ ಬದಲಾದುದರ ಹಿನ್ನೆಲೆಯನ್ನು ತಿಳಿಸಿರಿ.

24. 'ಆಗದು ಎಂದು' ಎಂಬ ಚಲನಚಿತ್ರಗೀತೆಯ ಸಾಹಿತ್ಯ ಸೌಂದರ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

25. ಸುಬ್ಬಣ್ಣನವರನ್ನು ಪುನಃ ಪ್ರಾಪಂಚಿಕ ಲೋಕಕ್ಕೆ ತಂದ ಘಟನೆಯನ್ನು ವಿವರಿಸಿರಿ.

26. 'ತಾಯಿ' ಕಥೆಯಲ್ಲಿ ಅಬ್ಬಕ್ಕಳಿಗೆ 'ತಾನು ಅಪರಾಧ ಮಾಡಿದ್ದೇನೆ' ಎಂಬ ಚಿಂತೆ ಮೂಡಲು ಕಾರಣವೇನು ?

27. 'ನೆರೆ' ಕಥೆಯಲ್ಲಿ ನಾಯಿಯ ಸ್ವಾಮಿನಿಷ್ಠೆ ಹೇಗೆ ಮೂಡಿ ಬಂದಿದೆ ? ವಿವರಿಸಿರಿ.

28. ತಂದೆಯ ಮನದಲ್ಲಿ ನೋವು ಮೂಡಲು ಕಾರಣವಾದ ಘಟನೆಗಳನ್ನು 'ಅವರವರ ದಾರಿ' ಕವನದ ಆಧಾರದಲ್ಲಿ ವಿಶದಪಡಿಸಿರಿ.

(29 ರಿಂದ 31 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.) (2 × 8 = 16)

29. 'ನಗರೀಕರಣದಿಂದ ವಿನಾಶದಂಚಿನತ್ತ ಸಾಗುತ್ತಿರುವ ಜೀವಸಂಕುಲ' ಎಂಬ ವಿಷಯದ ಕುರಿತು ಪ್ರಬಂಧ ಬರೆಯಿರಿ.

30. ಚೆಲುವನ ಬರವಿಗಾಗಿ ಹಾತೊರೆಯುವ ಅಬ್ಬಕ್ಕಳ ಮಾನಸಿಕ ತುಮುಲ 'ತಾಯಿ' ಕಥೆಯಲ್ಲಿ ವ್ಯಕ್ತವಾದ ಬಗೆಯನ್ನು ವಿವರಿಸಿರಿ.

31. ನಂಜುಂಡಕವಿ ಬರೆದ 'ನಾಡಸಿರಿ' ಕವಿತೆಯ ಒಟ್ಟು ಆಶಯವನ್ನು ನಿಮ್ಮ ಮಾತುಗಳಲ್ಲಿ ಸಂಗ್ರಹಿಸಿ ಬರೆಯಿರಿ.

---